ವಾರದ ಪತ್ರ

## ಚಂದದ 'ಶಿಬಿ' ಸಿನಿಮಾ

ದೂರದರ್ಶನದ 'ಚಂದನ'ದಲ್ಲಿ ಆಯೋಜಿಸಿದ 'ರೆಡಿ ರೋಲ್ ಆಕ್ಷನ್' ಕಿರು ಚಿತ್ರ ಮಾಲಿಕೆಯಲ್ಲಿ 12 ಅತ್ಯುತ್ತಮ ಚಿತ್ರಗಳನ್ನು ಆಯ್ಕೆ ಮಾಡಲಾಗಿದೆ. ಪ್ರತಿ ಶುಕ್ರವಾರ ಸಂಜೆ 7.30 ಪ್ರಸಾರವಾಗುತ್ತಿದೆ.

ನಿರ್ದೇಶಕ ಶೇಷಾದ್ರಿ ಮತ್ತು ಛಾಯಾಗ್ರಾಹಕ ಭಾಸ್ಕರ್ ಚಿತ್ರ ವಿಮರ್ಶೆಯನ್ನು ಮಾಡುತ್ತಿದ್ದಾರೆ. ಈ ಚಿತ್ರ ಸರಣಿಯಲ್ಲಿ 'ಶಿಬಿ' ಕಿರು ಚಿತ್ರ, ಅಂಗಾಂಗ ದಾನದ ಮಹತ್ವ ಕುರಿತು ಅರಿವು ಮೂಡಿಸಿತು. ಬದುಕಿನ ನಂತರವೂ ಜೀವಿಸಬಹುದು ಎಂಬ ಸಂದೇಶ ನೀಡಿದೆ. ದೇಹವನ್ನು ಆಸ್ಪತ್ರೆಗೆ ದಾನಮಾಡಬಹುದು. ಅದರ ಧಾರ್ಮಿಕ, ವೈಜ್ಞಾನಿಕ ದೃಷ್ಟಿಕೋನವನ್ನು ವಿವರಿಸುತ್ತಾ, ಅಂಗಾಂಗ ದಾನದ ಮಹತ್ವ ಸಾರಿರುವ ವಿಭಿನ್ನ ವಿಶಿಷ್ಟ ಚಿಂತನೆಯ ಚಿತ್ರ ಅದಾಗಿತ್ತು.

ಪ್ರೌಢ ಅಭಿನಯದ, ಉತ್ತಮ ನಿರೂಪಣೆಯ ಚಿತ್ರಕ್ಕೆ ಕಥೆಯನ್ನು ಎನ್. ಶಂಕರ ರಾವ್ ಅವರು ಬರೆದಿದ್ದಾರೆ. ವೆಂಕಟೇಶ ರಾವ್ ನಿರ್ದೇಶಿಸಿದ್ದಾರೆ. ಚಿತ್ರ ದ ಕೊನೆಯಲ್ಲಿ ಬರುವ ಹಾಡು 'ಹೋಗಿ ಬಾ ಬೆಳಕೆ, ಸದ್ಗತಿಯ ಪಡೆದೆ ನೀ ದಾನಯಜ್ಞ ಫಲದಿ... ಹೋಗಿ ಬಾ...' ಮನಸ್ಸನ್ನು ಕಲಕಿಬಿಡುತ್ತದೆ.

—ಎನ್. ಶಂಕರ ರಾವ್, ಬೆಂಗಳೂರು

## ಸದಭಿರುಚಿಯ ಮಹಾಲಕ್ಷ್ಮಿ

ಝೀ ಕನ್ನಡದಲ್ಲಿ ಪ್ರಸಾರವಾಗುವ 'ಮನೆ ಮನೆ ಮಹಾಲಕ್ಷ್ಮಿ' ಕಾರ್ಯಕ್ರಮದ ಹೆಸರೇ ಬಹಳ ಸೊಗಸಾಗಿದೆ. ಕುಟುಂಬದ ಸದಸ್ಯರು ಒಟ್ಟಾಗಿ ಸೇರಿ, ಬೆರೆತು ಈ ಕಾರ್ಯಕ್ರಮದ ಆಟಗಳನ್ನು ಆಡುವುದು, ಆಡದ ಸದಸ್ಯರು ಅವರನ್ನು ಪ್ರೋತ್ಸಾಹಿಸುವುದು ನಕ್ಕು ನಲಿಯುತ್ತಾ ವೀಕ್ಷಿಸುವುದು ಕುಟುಂಬದಲ್ಲಿ ಬಹಳ ಒಳ್ಳೆಯ ಬಾಂಧವ್ಯವನ್ನು ಬೆಸೆಯುವಂತೆ ಮಾಡುತ್ತದೆ. ಈಗಂತೂ ಕುಟುಂಬದ ಸದಸ್ಯರ ನಡುವೆ ಮಾತುಕತೆಗಳೇ ಕಡಿಮೆಯಾಗಿದೆ. ಎಲ್ಲರೂ ತಮ್ಮ ತಮ್ಮ ಮೊಬೈಲ್ ಫೋನ್‌ಗಳನ್ನು ನೋಡುತ್ತಾ ಅದರಲ್ಲೇ ಮುಳುಗಿ ಹೋಗಿರುತ್ತಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸುವುದರ ಮೂಲಕ ಕೊಂಚ ಕಾಲವಾದರೂ ಅದರಿಂದ ದೂರವಿದ್ದು ಕುಟುಂಬದೊಡನೆ ಕಾಲ ಕಳೆಯುವಂತಾಗಿದೆ. ಇದು ಒಳ್ಳೆಯ ಮನೋರಂಜನೆಯನ್ನೂ ನೀಡುತ್ತಿದೆ.

—ಕೆ.ಎಸ್. ಸವಿತ, ಬೆಂಗಳೂರು

## ಚಿನಕುರಳಿ ಆಗಬೇಕು

ಚಂದನದ 'ಥಟ್ ಅಂತ ಹೇಳಿ'ಯ ಪ್ರಶ್ನಾ ವಿಧಾನ ಬದಲಾಗಿದೆ. ಆಕರ್ಷಣೆ ಹೆಚ್ಚಿ ಅಧಿಕ ಪುಸ್ತಕಗಳನ್ನು ಗೆಲ್ಲಲು ಹಾದಿಯಾಗಿದೆ. ಆದರೆ ಕೊನೆಯ ಸುತ್ತಿನ ಪ್ರಶ್ನೆ 'ಚಟ್ ಪಟ್ ಚಿನಕುರುಳಿ' ಎಂಬಲ್ಲಿ 'ಚಿನಕುರಳಿ' ಎಂದೇ ಅಪಭ್ರಂಶವಾಗಿ ತೋರಿಸುತ್ತಿದ್ದಾರೆ! ಕಳೆದ ಕೆಲವು ದಿನಗಳಿಂದ ಎಲ್ಲಾ ಪ್ರಶ್ನೆಗಳ ಕೆಳತುದಿಯಲ್ಲಿ ಆಯ್ಕೆಗಳು ಹಾಗೂ ಉತ್ತರ ತೋರಿಸುವ ಸ್ಥಳದಲ್ಲಿ ಪ್ರಜ್ವಲಿಸುವ ಬೆಳಕಿನಿಂದ ಅಕ್ಷರಗಳೇ ಕಾಣುತ್ತಿಲ್ಲ.ಹಾಗಾಗಿ ನಮಗೆ ಉತ್ತರ ಹೇಳುತ್ತಾ ಕಾರ್ಯಕ್ರಮವನ್ನು ಆಸ್ವಾದಿಸಲಾಗುತ್ತಿಲ್ಲ.ಸಂಬಂಧಿಸಿದವರು ದಯವಿಟ್ಟು ಸರಿಪಡಿಸುವಿರಾ?

—ಕೆ. ಶ್ರೀನಿವಾಸ ರಾವ್. ಹರಪನಹಳ್ಳಿ

## ಮರೆಯಬಾರದು 'ಮಾಣಿಕ್ಯ'

'ಮರೆಯದ ಮಾಣಿಕ್ಯಗಳು' ಎಂಬ ಕಾರ್ಯಕ್ರಮವನ್ನು ದೂರದರ್ಶನದ ಚಂದನವಾಹಿನಿಯಲ್ಲಿ ಗಾಯಕ ಗುರುರಾಜ್ ನಡೆಸಿಕೊಡುತ್ತಿದ್ದಾರೆ. ಹಳೆಯ ಚಿತ್ರಗೀತೆಗಳು ಆಸಕ್ತ ಕೇಳುಗರಿಗೆ ತುಂಬ ಇಷ್ಟವಾಗುತ್ತದೆ. ಆದರೆ, ಪ್ರಸ್ತುತಿಯಲ್ಲಿರುವ ಗೊಂದಲವನ್ನು ದಯವಾಡಿ ಸಂಬಂಧಿಸಿದವರು ಸರಿಪಡಿಸಬೇಕು ಎನ್ನುವುದು ವಿನಂತಿ.

ಮಾರ್ಚ್ 24, 25ರಂದು ಸಂಗೀತ ನಿರ್ದೇಶಕ ಉಪೇಂದ್ರಕುಮಾರ್ ಗಾಯಕಿ ಎಸ್. ಜಾನಕಿಯವರ ಭಾವಚಿತ್ರ ಮತ್ತು ಹೆಸರು ತೆರೆಮೇಲೆ ತೋರಿಸಿ, ವಿಶೇಷ ಸಂಚಿಕೆ ಎಂದು ಹೇಳಲಾಗಿತ್ತು. ಆದರೆ ಗಾಯಕಿಯರಿಬ್ಬರೂ ಹಾಡಿದ್ದು ಮಾತ್ರ ಉಪೇಂದ್ರಕುಮಾರರ ಸಂಗೀತದ ಬದಲಿಗೆ ರಾಜನ್ ನಾಗೇಂದ್ರ (ಆಟೋರಾಜ, ತಾಯಿಗಿಂತ ದೇವರಿಲ್ಲ) ಜಿ.ಕೆ. ವೆಂಕಟೇಶ್ (ಮರೆಯದಹಾಡು, ಸನಾದಿಅಪ್ಪಣ್ಣ), ಸತ್ಯಂ (ಸೀತಾರಾಮು) ಹೀಗೆ ಇತರರ ಸಂಯೋಜನೆ ಹಾಡುಗಳನ್ನು ಹಾಡಿದರು. ಅವುಗಳನ್ನು ಜಾನಕಿಯವರೇ ಹಾಡಿದ್ದರೂ ಸಂಗೀತ ಸಂಯೋಜನೆಯನ್ನು ಉಪೇಂದ್ರಕುಮಾರ್ ಮಾಡಿರಲಿಲ್ಲ. ಎಲ್ಲ ಕೇಳುಗರಿಗೂ ನಿಖರ ಮಾಹಿತಿ ಇಲ್ಲದೆ ಇರಬಹುದು. ಅಂತಹ ಸಂದರ್ಭದಲ್ಲಿ ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆ ಇರುತ್ತದೆ. ಗೊತ್ತಿದ್ದ ವೀಕ್ಷಕರಲ್ಲಿ ಕಸಿವಿಸಿಯನ್ನು ಉಂಟುಮಾಡಿದಂತೆ ಆಗುತ್ತದೆ. ದಯಮಾಡಿ ಮುಂದಿನಸಂಚಿಕೆಗಳಲ್ಲಿ ಸರಿಪಡಿಸಿ.

—ಸೂರ್ಯಪ್ರಕಾಶ, ಹಾಸನ

## ಮಾದರಿ ಕೆಲಸ ಆಗಲಿ

ಝೀ ಕನ್ನಡ ವಾಹಿನಿ ಪ್ರತಿವರ್ಷ ಅವಾರ್ಡ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತದೆ. ನಿರ್ದೇಶನ ಮತ್ತು ಅಭಿನಯಕ್ಕೆ ಪ್ರಶಸ್ತಿಗಳನ್ನು ನೀಡಿ ಅವರನ್ನು ಗೌರವಿಸುತ್ತಿದ್ದಾರೆ. ಈ ಅವಾರ್ಡ್ ಕಲಾವಿದರಿಗೆ ಸ್ಫೂರ್ತಿ ನೀಡುತ್ತದೆ.

ಜೊತೆಗೆ ವೀಕ್ಷಕರಿಗೆ ಮನರಂಜನೆಯನ್ನು ನೀಡುತ್ತಿದೆ. ಆರ್ಥಿಕ ತೊಂದರೆವುಳ್ಳವರಿಗೆ ಸಹಾಯ ಹಸ್ತವನ್ನೂ ಈ ವಾಹಿನಿ ಚಾಚುತ್ತದೆ. ಆರ್ಥಿಕ ಸಂಕಷ್ಟದಲ್ಲಿ ಇರುವ ಕಲಾವಿದರ ಮಕ್ಕಳ ಓದಿಗೆ ನೆರವು ನೀಡುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಬಹುದು. ತನ್ನ ಮಿತಿಯಲ್ಲಿಯೂ ಸಮಾಜಮುಖಿ ಕೆಲಸ ಮಾಡುವ ಸಾಧ್ಯತೆಗೆ ಮಾದರಿಯಾಗಲಿ.

—ಎಂ.ಎಸ್. ಉಷಾ ಪ್ರಕಾಶ್ ಮೈಸೂರು

## ಮನೋಜ್ಞ ಕಥೆ

ಕಲರ್ಸ್ ಸೂಪರ್‌ನ 'ಮುದ್ದುಬಂಗಾರ' ಕ್ಲೈಮ್ಯಾಕ್ಸ್ ತಲುಪುತ್ತಿದೆ. ಅತಿಯಾಗಿ ಪ್ರೀತಿಸಿದ ಇಚ್ಛಾಳನ್ನು ಪರಿಸ್ಥಿತಿಯ ದಾಸನಾಗಿ ಬಿಟ್ಟುಕೊಡುವ ಸನ್ನಿವೇಶ ಎಂತಹವರಿಗೂ ಕರುಳು ಮಿಡಿಯುತ್ತದೆ. ಡ್ರಗ್ಸ್‌ಗೆ ಜೋತುಬಿದ್ದು ಸಹಜ ಜೀವನ ವಂಚಿತನಾಗಿದ್ದ ವಂಶಿಯನ್ನು ಕಾಂತೀಯ ಸ್ಪರ್ಶಕೊಟ್ಟು ವೈದ್ಯರಿಗೆ ಸವಾಲಗಿದ್ದ ಸಮಸ್ಯೆಯನ್ನು ಮನೋಸಂವೇದನೆ ಮೂಲಕ ಸರಿಪಡಿಸಿದ ರೀತಿ ಮೆಚ್ಚುಗೆಗೆ ಪಾತ್ರವಾಗಿದೆ.

ನಯ, ವಿನಯ ಮತ್ತು ಮೃದುಮಾತು ಲೋಕವನ್ನು ಗೆಲ್ಲುತ್ತದೆ ಎಂಬುದು ಸ್ಪಷ್ಟ. ಜವಾಬ್ದಾರಿ ಪೋಷಕರಾಗಿ ಜೋಗಿ ಮತ್ತು ದಿವ್ಯ ಉತ್ಕೃಷ್ಟ ಅಭಿನಯ ನೀಡುತ್ತಿದ್ದಾರೆ. ಇಚ್ಛಾ ಮತ್ತು ತಪಸ್ಯ ಪಾತ್ರದಾರಿಗಳು ಒಂದೇ ನಾಣ್ಯದ ಎರಡು ಮುಖಗಳು ಇದ್ದಂತೆ ಇದ್ದರು. ಆದರೆ ಅವರಲ್ಲಿ ಅಸೂಯೆ ಹುಟ್ಟಿದರೆ ಏನಾಗುತ್ತದೆ ಎಂಬುದನ್ನು ಧಾರಾವಾಹಿ ಮನೋಜ್ಞವಾಗಿ ಕಟ್ಟಿಕೊಟ್ಟಿದೆ.

—ಬಿ.ಕೆ. ಅನ್ನಪೂರ್ಣಾದೇವಿ, ತುಮಕೂರು

## ಮೆದುಳಿಗೆ ಕೈ ಹಾಕಿದ್ದಾರಾ?

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ಗೀತಾ ಧಾರಾವಾಹಿಯಲ್ಲಿ ಕಾಲೇಜಿನಿಂದ ಒಂದು ದಿನದ ಮಟ್ಟಿಗೆ ಒಂದು ಕಡೆ ಪ್ರವಾಸ ಹೋಗುತ್ತಾರೆ. ಅಲ್ಲಿ ಗೀತಾ ಎಲ್ಲರಿಂದ ತಪ್ಪಿಸಿಕೊಂಡು ಕಾಡು ಸೇರುತ್ತಾಳೆ, ಅವಳನ್ನು ಹುಡಿಕಿಕೊಂಡು ವಿಜಿ ಸಹ ಕಾಡು ಪಾಲಾಗುತ್ತಾನೆ ಒಂದು ದಿನದ ಟೂರ್ ಎಂದುಕೊಂಡು ಒಂದು ತಿಂಗಳಾದರೂ ಕಾಡಿನಿಂದ ಹೊರಬರೆದೆ ಅನವಶ್ಯಕ ಸರಕು ತುಂಬಿ ವೀಕ್ಷಕರ ಮೆದುಳಿಗೆ ಕೈ ಹಾಕಿದ್ದಾರೆ ನಿರ್ದೇಶಕರು. ಇದು ನಿಜಕ್ಕೂ ಸಹಿಸಲು ಅಸಾಧ್ಯ. ದಯವಿಟ್ಟು ಇದನ್ನು ಸರಿಪಡಿಸಿ ಧಾರವಾಹಿ ಮುಂದುವರಿಸಿದರೆ ಉತ್ತಮ ಎನಿಸುತ್ತದೆ. ಎಷ್ಟು ದಿನ ಎಂದು ವೀಕ್ಷಕ ಸಹಿಸಲು ಸಾಧ್ಯ ಎಂಬುದನ್ನು ಸ್ವತಃ ನಿರ್ದೇಶಕರೇ ಅರಿಯಬೇಕು.

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು